ಆ) ೧೫,೩೫೬ ಎಕರೆ ೭ ಗುಂಟೆ ಜಮೀನನ್ನು ಗುತ್ತಿಗೆ ಮೇರೆಗೆ ನೀಡಲಾಗಿದೆ

ಇ) ಸಾಗುವಳಿಗಾಗಿ ಜಮೀನನ್ನು, ವಸತಿ, ರಸ್ತೆ, ಆಸ್ಪತ್ರೆ ಶಾಲೆ, ಕಾರ್ಯಾಗಾರ, ವಿದ್ಯುಚ್ಛಕ್ತಿ, ಕುಡಿಯುವ ನೀರು ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದೆ.

ಈ) ರೂ ೨,೨೨ ೯೫,೫೧೪-೪೧೫೪

ಜಪಂಲಾಬಾದ ಗಡವನ್ನು ಪ್ರವಾಸಿ ತಾಣವನ್ನಾಗಿ ಪರಿವರ್ತಿಸುವ ಬಗ್ಗೆ

೭೨೯ ಶ್ರೀ ವಸಂತ ಬಂಗೇರಾ. (ಬೆಳ್ತಂಗಡಿ).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ (ಕುದುರೆ ಮುಖದ ಮಂಗ್ಳುಲ್ಲಿರುವ) ಜಮಲಾಬಾದ್ ಗಡವನ್ನು '' ಪ್ರವಾಸಿ ತಾಣ '' ವನ್ನಾಗಿ ಮಾಡುವ ಯೋಜನೆ ಸರ್ಕಾರದವರ ಗಮನದಲ್ಲಿಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈ ಗೊಂಡ ಕ್ರಮವೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಳ್ತಂಗಡಿಯಲ್ಲಿ ಕ್ರೀಡಾ ಹಾಸ್ಟಲ್ ಮಂಜೂರು ಮಾಡುವ ಬಗ್ಗೆ

೭೩೧ ಶ್ರೀಯುತ ವಸಂತ ಬಂಗೇರರವರ (ಬೆಳ್ತಂಗಡಿ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕು ಮಲೆನಾಡು ಪ್ರದೇಶವಾಗಿದ್ದು ಈ ಪ್ರದೇಶದ ವಿದ್ಯಾರ್ಥಿಗಳ ಕ್ರೀಡಾ ಪ್ರತಿಭೆಯು ಅಭಿವೃದ್ಧಿಗಾಗಿ ಬೆಳ್ತಂಗಡಿ ತಾಲ್ಲೂಕಿನ ಕ್ರೀಡಾ ವಿದ್ಯಾರ್ಥಿ ನಿಲಯವೊಂದನ್ನು ೧೯೮೭-೮೮ನೇ ಸಾಲಿನಲ್ಲಿ ಮಂಜೂರು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಂ.ಪಿ. ಪ್ರಕಾಶ್(ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಮಂಗಳೂರಿನಲ್ಲಿ ಹಾಗೂ ಪುತ್ತೂರಿನಲ್ಲಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಈಗಾಗಲೇ ಕ್ರೀಡಾ ನಿಲಯಗಳನ್ನು ನಡೆಸುತ್ತಿದೆಯಾದ್ದರಿಂದ ಸದ್ಯದಲ್ಲಿ ಬೆಳ್ತಂಗಡಿಯಲ್ಲಿ ಕ್ರೀಡಾ ನಿಲಯವನ್ನು ಪ್ರಾರಂಭಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕಲಾವಿದರ ಮತ್ತು ಸಾಹಿತಿಗಳ ಗೌರವಧನದ ಬಗ್ಗೆ

೭೩೨ ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಇದುವರೆಗೆ ಮಾಸಾಶನ ಮಂಜೂರು ಮಾಡಲಾಗಿರುವ ಕಲಾವಿದರ ಮತ್ತು ಸಾಹಿತಿಗಳ ಸಂಖ್ಯೆ ಎಷ್ಟು ?